## ಕರ್ನಾಟಕ ಸರ್ಕಾರ

ಸಂಖ್ಯೆ: ED/39/egov/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು ದಿನಾಂಕ: 06.02.2021

## ಸುತ್ತೋಲೆ

ವಿಷಯ: ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಎಲ್ಲಾ ಮೆಟ್ರಿಕ್ ನಂತರದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗಾಗಿ Helpdesk ವ್ಯವಸ್ಥೆಯನ್ನುಕಲ್ಪಿಸುವ ಬಗ್ಗೆ.

-----

2019-20ನೇ ಸಾಲಿನ ರಾಜ್ಯ ವಿದ್ಯಾರ್ಥಿವೇತನ ತಾಣದಲ್ಲಿ (State Scholarship Portal) ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ರಾಜ್ಯ ಸರ್ಕಾದ ವಿವಿಧ ಇಲಾಖೆಗಳಿಂದ – ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಹೀಗೆ ಹಲವಾರು ಇಲಾಖೆಗಳಿಂದ ರಾಜ್ಯ ವಿದ್ಯಾರ್ಥಿ ವೇತನ ಜಾಲತಾಣದ ಮೂಲಕ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ.

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿನ ವಿಶ್ವವಿದ್ಯಾಲಯ/ಅಧೀನ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶಕ್ಕೆ ಒದಗಿಸಲು ಕ್ರಮಕೈಗೊಂಡಿದ್ದು, ಎಲ್ಲಾ ವಿಶ್ವವಿದ್ಯಾಲಯಗಳೂ ತಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಸಂಯೋಜನೆಗೊಂಡಿರುವ ಕಾಲೇಜು ವಿದ್ಯಾರ್ಥಿಗಳ ಮಾಹಿತಿಗಳನ್ನು ಇಲಾಖಾ ನೋಡಲ್ ಅಧಿಕಾರಿಯು ನೀಡುವ ಸೂಚನೆಗಳಿಗನುಗುಣವಾಗಿ, ಕೂಡಲೇ ಇಲಾಖೆಗೆ ಒದಗಿಸಲು ಸೂಚಿಸಿದೆ. ಯಾವುದೇ ವಿಶ್ವವಿದ್ಯಾಲಯ ತನ್ನ ವಿದ್ಯಾರ್ಥಿಗಳ ಮಾಹಿತಿಯನ್ನು ಇಲಾಖಾ ನೋಡಲ್ ಅಧಿಕಾರಿಗೆ ಸೂಕ್ತ ಸಮಯದೊಳಗಾಗಿ ಒದಗಿಸದೇ ಇದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ

ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದೇ, ವಿದ್ಯಾರ್ಥಿ ವೇತನದಿಂದ ವಂಚಿತರಾಗುವ ಸಾಧ್ಯತೆ ಇರುತ್ತದೆ.

ರಾಜ್ಯ ವಿದ್ಯಾರ್ಥಿ ವೇತನ ಜಾಲತಾಣದಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಸಲ್ಲಿಸುವ ವಿದ್ಯಾರ್ಥಿಗಳು ತಮ್ಮ ಮತ್ತು ತಮ್ಮ ಪೋಷಕರ ಆಧಾರ್ ವಿವರಗಳು, ಜಾತಿ/ಆದಾಯ ಪ್ರಮಾಣಪತ್ರದ ವಿವರಗಳು, ಮೊಬೈಲ್ ಸಂಖ್ಯೆ, ವಿಳಾಸ, ಅವರು ವಿದ್ಯಾಭ್ಯಾಸ ಮಾಡುತ್ತಿರುವ ಶಿಕ್ಷಣ ಸಂಸ್ಥೆಯ ವಿವರಗಳು ಹೀಗೆ ಹಲವು ಅತ್ಯಂತ ಖಾಸಗಿ ಹಾಗೂ personally identifiable information (ವ್ಯಕ್ತಿಯನ್ನು ಗುರುತಿಸಲು ಸಾಧ್ಯವಾಗಬಲ್ಲ ವಿವರಗಳು)ಗಳನ್ನು ನೀಡುತ್ತಿದ್ದಾರೆ. **ಈ ಎಲ್ಲಾ ಮಾಹಿತಿಗಳು ವಿದ್ಯಾರ್ಥಿಗಳು ಜಾಲತಾಣದಲ್ಲಿ, ಅಳವಡಿಸಲು ಸಾಧ್ಯವಾದಷ್ಟು ಆಯಾ ಶಿಕ್ಷಣ ಸಂಸ್ಥೆಗಳು ಸಹಕಾರ ನೀಡಬೇಕಾಗಿದ್ದು,** ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ವೇತನಕ್ಕಾಗಿ online ನಲ್ಲಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ, ಈ ಕೆಳಗೆ ಸೂಚಿಸಿರುವ ಕನಿಷ್ಠ ಸೌಲಭ್ಯವನ್ನು ಒಳಗೊಂಡ "**ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಸಹಾಯಕೇಂದ್ರ**" ವನ್ನು ತೆರೆಯಲು ಸೂಚಿಸಿದೆ.

a) ಕಾಲೇಜಿನಲ್ಲಿ ಲಭ್ಯವಿರುವ ಅಂತರ್ ಜಾಲ ಸಂಪರ್ಕದ (Internet facility) ವ್ಯವಸ್ಥೆ ಹೊಂದಿರುವ computer ಮತ್ತು ಪರಿಕರಗಳನ್ನು ವಿದ್ಯಾರ್ಥಿಗಳ ಬಳಕೆಗೆ ನೀಡುವುದು.

b) ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿಸಲ್ಲಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಬೇಕಾದಲ್ಲಿ, ನುರಿತ ಅಧಿಕಾರಿ/ಉಪನ್ಯಾಸಕರು/ ಸಿಬ್ಬಂದಿ ವರ್ಗದವರನ್ನು ನಿಯೋಜಿಸುವುದು.

c) ಸದರಿ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಗಳನ್ನು ವಿಶ್ವವಿದ್ಯಾಲಯ/ಕಾಲೇಜುಗಳ Notice Board ಗಳಲ್ಲಿ ಪ್ರಕಟಿಸುವುದು..

ಎಲ್ಲಾ ವಿಶ್ವವಿದ್ಯಾಲಯ /ಸರ್ಕಾರಿ /ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮದೇ ಆದ ಹಾಸ್ಟೆಲ್ ವ್ಯವಸ್ಥೆಯನ್ನು ಹೊಂದಿದ್ದಲ್ಲಿ, ಕೂಡಲೇ ಸಮಾಜಕಲ್ಯಾಣ ಇಲಾಖೆಯ ಜಿಲ್ಲಾ/ತಾಲ್ಲೂಕು ಅಧಿಕಾರಿಗಳನ್ನು ಸಂಪರ್ಕಿಸಿ Integrated Hostel Management System (ಏಕೀಕೃತ ವಸತಿನಿಲಯ ಮಾಹಿತಿ ನಿರ್ವಹಣಾ ವ್ಯವಸ್ಥೆ) ನಲ್ಲಿ ತಮ್ಮ ಹಾಸ್ಟೆಲ್ ವಿವರಗಳನ್ನು ಒದಗಿಸಿ, ಸದರಿ ತಂತ್ರಾಂಶದಲ್ಲಿ ನೋಂದಣಿ ಮಾಡಿಸಿಕೊಳ್ಳುವಂತೆ ಸೂಚಿಸಿದೆ. ಆನಂತರ ವಿದ್ಯಾರ್ಥಿನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳ ಮಾಹಿತಿಯನ್ನು Integrated Hostel Management System ನಲ್ಲಿ ವಿಶ್ವವಿದ್ಯಾಲಯಗಳು/ಕಾಲೇಜುಗಳೇ ಭರ್ತಿ ಮಾಡಬೇಕಾಗುತ್ತದೆ. ಯಾವುದೇ ವಿಶ್ವವಿದ್ಯಾಲಯ/ ಕಾಲೇಜಿನ ಹಾಸ್ಟೆಲ್‌ಗಳ ಮಾಹಿತಿಗಳನ್ನು ಫೆಬ್ರವರಿ 15, 2020 ರೊಳಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸದೇ ಇದ್ದಲ್ಲಿ, ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುವಲ್ಲಿ ಆಗಬಹುದಾದ ತೊಂದರೆಗೆ, ಆಯಾ ವಿಶ್ವವಿದ್ಯಾಲಯ/ಕಾಲೇಜುಗಳೇ ನೇರ ಹೊಣೆಗಾರರಾಗುತ್ತಾರೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳು, ಈ ಕೆಳಕಂಡ ಮಾಹಿತಿಯನ್ನು ಪ್ರಚಾರ ಪಡಿಸಲು ಸೂಚಿಸಿದೆ.

1. ಯಾವುದೇ ಅರ್ಹ ವಿದ್ಯಾರ್ಥಿಯ ಬಳಿ ಅವನ/ಅವಳ ಅಥವಾ ಅವನ/ಅವಳ ಪೋಷಕರ ಆದಾರ್ ಸಂಖ್ಯೆ ಇಲ್ಲದಿದ್ದಲ್ಲಿ ಅವರಿಗೆ ಹತ್ತಿರದ ಆಧಾರ್ ನೋಂದಣಿ ಸೆಂಟರ್‌ಗೆ ಭೇಟಿ ನೀಡಿ ನೋಂದಾಯಿಸಲು ಸೂಚಿಸುವುದಲ್ಲದೆ ಆಧಾರ್ ಸೆಂಟರ್ ನೀಡುವ EID (Enrolment ID) ಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ನಮೂದಿಸಿ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ.
2. ಎಲ್ಲಾ ವಿದ್ಯಾರ್ಥಿಗಳಿಗೂ ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಕೊಳ್ಳಬೇಕು.
3. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರನಲ್ಲಿರುವ ಜಾತಿ/ಆದಾಯ ಪ್ರಮಾಣಪತ್ರ/EWS ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯವಾಗಿರುವ ಕಾರಣ ಆದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ, ಹತ್ತಿರದ ಅಟಲ್ ಜೀಜನಸ್ನೇಹಿ ಕೇಂದ್ರಕ್ಕೆ/ನಾಡಕಚೇರಿಗೆ ಭೇಟಿ ನೀಡಿ ಅರ್ಜಿಸಲ್ಲಿಸಿದಲ್ಲಿ ಅವರಿಗೆ ನೀಡಲಾಗುವ ಸ್ವೀಕೃತಿ ಸಂಖ್ಯೆಯನ್ನು (RD No.) ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ನಮೂದಿಸಬಹುದು.
4. ಅಂಗವಿಕಲ ವಿದ್ಯಾರ್ಥಿಗಳ ಬಳಿ UDID ನಂಬರ್ ಇಲ್ಲದಿದ್ದಲ್ಲಿ, UDID ವೆಬ್ ಸೈಟ್ನಲ್ಲಿ ನೋಂದಾಯಿಸಿ, ಸ್ವೀಕೃತಿ ಸಂಖ್ಯೆಯನ್ನು ಒದಗಿಸಬಹುದಾಗಿದೆ.

ರಾಜ್ಯ ವಿದ್ಯಾರ್ಥಿವೇತನ ಜಾಲತಾಣದಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕಾಲಾವಕಾಶ ಸೀಮಿತವಾಗಿರುವ ಕಾರಣ ಕೂಡಲೇ ಎಲ್ಲಾ ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಯಾವುದೇ ಅರ್ಹ ವಿದ್ಯಾರ್ಥಿಗಳು ರಾಜ್ಯ ಸರ್ಕಾರ ಒದಗಿಸಿರುವ ವಿದ್ಯಾರ್ಥಿವೇತನ ಸೌಲಭ್ಯದಿಂದ ವಂಚಿತರಾಗದಂತೆ ನೋಡಿಕೋಳುವುದು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ.

ಯಾವುದೇ ವಿಶ್ವವಿದ್ಯಾಲಯ/ಕಾಲೇಜಿನ ಹೆಸರು, ಕೋರ್ಸ್ ಅಥವಾ discipline/ combinationನ ವಿವರಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಲಭ್ಯವಿಲ್ಲದಿದ್ದಲ್ಲಿ ಕೂಡಲೇ ಉನ್ನತ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿಗೆ AISHE ಸಂಖ್ಯೆ ಒಳಗೊಂಡಂತೆ, ಕಾಲೇಜಿನ ವಿವರಗಳನ್ನು ನೀಡಿ ರಾಜ್ಯ ವಿದ್ಯಾರ್ಥಿವೇತನ ಜಾಲತಾಣದಲ್ಲಿ ಲಭ್ಯವಾಗುವಂತೆ ಕ್ರಮಕೈಗೊಳ್ಳಬಹುದಾಗಿದೆ.

ಈ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಅಥವಾ ತಾಂತ್ರಿಕ ಸಲಹೆ ಬೇಕಾದ್ದಲ್ಲಿ ಇಲಾಖೆಯ, ಈ ಕೆಳಗಿನ **ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಸಹಾಯವಾಣಿಯನ್ನು** ಸಂಪರ್ಕಿಸಬಹುದಾಗಿದೆ.

| **ಉನ್ನತ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿಯ ವಿವರಗಳು** | |
|---|---|
| ಹೆಸರು | ಡಾ. ಭಾಗ್ಯವಾನ ಎಸ್. ಮುದಿಗೌಡ್ರ |
| ಮೊಬೈಲ್ | 9480584366 |
| ಇ-ಮೇಲ್ ವಿಳಾಸ | egov.highedu.kar@gmail.com |
| **ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಸಹಾಯವಾಣಿ ವಿವರಗಳು** | |
| SSP Helpdesk email | postmatrichelpdesk@karnataka.gov.in |
| SSP Helpdesk Phone No. | 08035254757 |

Mahesh.

**(ಮಹೇಶ್ ಆರ್.)**

ಸರ್ಕಾರದ ಅಧೀನ ಕಾರ್ಯದರ್ಶಿಗಳು

ವಿಶ್ವ ವಿದ್ಯಾಲಯ-2, ಉನ್ನತ ಶಿಕ್ಷಣ ಇಲಾಖೆ

ಇವರಿಗೆ:

1. ಕುಲಪತಿಗಳು, ಕರ್ನಾಟಕ ರಾಜ್ಯದ ಎಲ್ಲಾ ಸಾರ್ವಜನಿಕ/ಖಾಸಗಿ/ಡೀಮ್ ಟು ಬಿ ವಿಶ್ವವಿದ್ಯಾಲಯಗಳು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ- ರಾಜ್ಯದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶನ ನೀಡಲು ಕೋರಿದೆ.
3. ಕುಲಸಚಿವರು, ಕರ್ನಾಟಕ ರಾಜ್ಯದ ಎಲ್ಲಾ ಸಾರ್ವಜನಿಕ/ಖಾಸಗಿ/ಡೀಮ್ ಟು ಬಿ ವಿಶ್ವವಿದ್ಯಾಲಯಗಳು.
4. ಪ್ರಾಂಶುಪಾಲರು, ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಕಾಲೇಜುಗಳು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಮತ್ತು ಅಭಿವೃದ್ಧಿ ಆಯುಕ್ತರ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ, ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ, ಆಪ್ತ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ, ಆಪ್ತ ಕಾರ್ಯದರ್ಶಿಗಳು, ಇ-ಆಡಳಿತ ಇಲಾಖೆ.
9. ಯೋಜನಾಧಿಕಾರಿಗಳು, ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಜಾಲತಾಣ, ಇ-ಆಡಳಿತ ಇಲಾಖೆ.
10. ನೋಡಲ್ ಅಧಿಕಾರಿಗಳು, ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಜಾಲತಾಣ, ಉನ್ನತ ಶಿಕ್ಷಣ ಇಲಾಖೆ.